ಓಂಕುಮಾರ್ ಬಿ.ಎಸ್. ಬೀದರ್
*ನಾವು ನಿಮಗೆ ಪ್ರಶ್ನೆಗಳನ್ನು ಏಕೆ ಕಳುಹಿಸಬೇಕು?*



ಪ್ರೈಮರಿ ಸ್ಕೂಲ್ ಮೇಷ್ಟ್ರಿಂದ ಹಿಡಿದು ಪತ್ನಿಯವರೆಗೆ ಎಲ್ಲರೂ ನಿಮ್ಮನ್ನೇ ಪ್ರಶ್ನಿಸಿ, ಪ್ರಶ್ನಿಸಿ ಗೋಳಾಡಿಸಿದ್ದರಲ್ಲಾ, ಅವುಗಳೆಲ್ಲದರ ಸೇಡನ್ನು ನನ್ನ ಮೇಲೆ ತೀರಿಸಿಕೊಳ್ಳಲು!

ಬಸವಣ್ಣ ಹೊನಖಾಂಡೆ, ಅಥಣಿ
*ಗುರೂ, ನಿಮ್ಮನ್ನು ನೋಡಬೇಕೆಂಬಾಸೆ. ಯಾವ ವಾಹನದಲ್ಲಿ ಬರಲಿ?*
ದೇಹವೆಂಬ ವಾಹನದಲ್ಲಿ, ಪ್ರಾಣವೆಂಬ ಡ್ರೈವರ್ ನೊಡನೆ, ನೆಮ್ಮದಿ, ಆರೋಗ್ಯಗಳೆಂಬ ಸ್ನೇಹಿತರೊಡನೆ ಮನೋವೇಗದಲ್ಲಿ ಬಂದುಬಿಡಿ!

ಎಂ.ಎಸ್.ಧರ್ಮೇಂದ್ರ ಜಿಟಿಆರ್‌ಐ ಕ್ಯಾಂಪಸ್
*ಇಲ್ಲೊಬ್ಬಳು ನನ್ನನ್ನು ನೋಡಿದಾಗ ಜೋಕೆ, ನಾನು ಆಟಂಬಾಂಬ್ ಅನ್ನುತ್ತಾಳಲ್ಲಾ...?*



ತಿಳಿಯಿತು ಬಿಡಿ; ನೀವು ಕಿಡಿ ಗೇಡಿ!

ಗಣಪತಿ ಗೋಪಾಲ ಹೆಗಡೆ, ಅವರ್ಸಾ
*ಸಾಲ ಶೂಲವಾಗುವುದು ಯಾವಾಗ?*
ರಿಕವರಿ ವ್ಯಾನ್ ಮನೆಯ ಮುಂದೆ ನಿಂತಾಗ!

ಡಿ.ಎಲ್. ಚಂದ್ರಿಕಾ, ಚನ್ನಗಿರಿ
*ಸಿಲ್ಕ್ ಸ್ಮಿತಾ **dirty** ನಾ?*
ಸಿಕ್ಕಬಾರದವರ ಕೈಗೆ ಸಿಲುಕಿದರೆ ಸಿಲ್ಕೂ ಶಿಲ್ಕೇ!

ಸಂತೇಬೆನ್ನೂರು ಫೈಜ್ನಟ್ರಾಜ್, ಸಂತೇಬೆನ್ನೂರು
*ಜೀವನದ ಜಂಜಾಟಕ್ಕೆ ಕೊನೆ ಎಂದು?*
ಹೆಸರಿನಲ್ಲೇ ಹಿಂದು– ಮುಸ್ಲಿಂ ಐಕ್ಯತೆ ಹೊಂದಿ, ಸ್ನೇಹದ ಹಿರಿಮೆ ಮೆರೆಸುವ ನಿಮ್ಮಂತಹವರು ಹೆಚ್ಚಾದಾಗ!

ದೊಡ್ಡಲಿಂಗೇಗೌಡ, ಮಳವಳ್ಳಿ
*ರಾಜಕಾರಣಿಗಳಿಗೆ ಏಕೆ ನಿವೃತ್ತಿಯ ವಯೋಮಿತಿ ಇಲ್ಲ?*
ವೃತ್ತಿಗೆ ಮಾತ್ರ ನಿವೃತ್ತಿ; ಪ್ರವೃತ್ತಿ, ದುರ್ವೃತ್ತಿಗಳಿಗೆ ನಿವೃತ್ತಿ ಇರುವುದಿಲ್ಲ.

ಎಂ.ಎನ್. ಸೋಮಶೇಖರ್, ಮೈಸೂರು
*ಈಗಲೀಗ ಕೆಲವು ಮಹಾಮಾತೆಯರು ತಾವು ಹೆತ್ತ ಹಸುಗೂಸುಗಳನ್ನು ಎಲ್ಲೆಂದರಲ್ಲಿ ಬಿಸಾಡಿ ಹೋಗುತ್ತಿರುವುದೇಕೆ?*
ಕುಂತಿಯ ಆದರ್ಶ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಸತ್ಯವು ಕಹಿಯಾಗಿಯೂ, ಸುಳ್ಳು ಸಿಹಿಯಾಗಿಯೂ ಇರುತ್ತವಂತೆ; ಯಾಕೆ ರಾಮ್‌ಜೀ?*
ಹಾಗೇನಿಲ್ಲ, ಸುಳ್ಳಿನ ಸಿಹಿ ತಿಂದನಂತರ ಸತ್ಯದ ಕಾಫಿ ರುಚಿಸುವುದಿಲ್ಲ ಅಷ್ಟೆ.

ಜಾ.ರು. ಆದಿನಾರಾಯಣಮುನಿ, ಬೆಂಗಳೂರು
*ಭಗವಂತನನ್ನೂ ಬಿಡದೆ ಕಾಡುವ ಸಮಸ್ಯೆ ಯಾವುದು?*
ಕಲಬೆರಕೆ ಎಣ್ಣೆಯ ವಾಸನೆ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಕೆಲವರಿಗೆ ಎಷ್ಟೇ ಸಹಾಯ ಮಾಡಿದರೂ ಕೃತಜ್ಞತೆ ಎಂಬುದೇ ಇಲ್ಲದಿರುವ ಕಾರಣ?*
ಇರುತ್ತದೆ, ನಮಗೆ ಅರ್ಥವಾಗುವುದಿಲ್ಲವಷ್ಟೆ. ಹಾಲು ಪಡೆದ ಹಾವು ಪ್ರೀತಿಯಿಂದ ಮುತ್ತಿಕ್ಕಿದಾಗ ಜನ ಸತ್ತರೆ ಅದರ ತಪ್ಪೇ?

ಜಿ. ಕಾಂತರಾಜು, ಗೌರಿಬಿದನೂರು
*ಗಂಭೀರ ಪ್ರಶ್ನೆಗಳನ್ನು ಕೇಳಿದರೆ ಹಾಸ್ಯಭರಿತವಾಗಿ, ಚಾಣಾಕ್ಷತನದಿಂದ ಉತ್ತರಿಸಿ ಸತ್ಯವನ್ನು ಮರೆಮಾಚುತ್ತೀರಲ್ಲ, ಏಕೆ?*
ಸತ್ಯ ಮರೆಮಾಚಲು ನಾನೇನು ಬೆಂಗಳೂರಿನ ರೌಡಿ–ವಕೀಲನೆ? ನಗ್ನಸತ್ಯಕ್ಕೊಂದಿಷ್ಟು ವಿಡಂಬನೆಯ ಬಟ್ಟೆ ತೊಡಿಸುತ್ತೇನಷ್ಟೆ!

ಎಸ್. ಶ್ರೀಕಂಠೇಶ್ವರ, ಬಸವನಗುಡಿ
*ಕಾಕ್‌ಟೈಲ್ ಡಿನ್ನರ್ ಎಂದರೇನು ರಾಮ್‌ಜಿ?*
ಹುಂಜದಂತೆ ಜಂಭ ಕೊಚ್ಚಿಕೊಂಡು, ಕೋಳಿ ಕೆದಕಿದಂತೆ ಕೆದಕುತ್ತಾ ಮಾಡುವ ಊಟ!

## ಬಹುಮಾನಿತ ಪ್ರಶ್ನೆ

ಶ್ರೀಮತಿ ಸುನಂದಮ್ಮ, ಗೌರಿಬಿದನೂರು
*ಹೆಣ್ಣು ಹೃದಯ ಅಂತಾರೆ, ಗಂಡೆದೆ ಅಂತಾರೆ. ಯಾಕೆ?*
ಸರಿಯೇ; ಕಷ್ಟಕಾಲದಲ್ಲಿ ಹೋರಾಡುವುದು ಗಂಡು; ಜೀವನ ಪೂರ್ತಿ ಬಡಿದುಕೊಳ್ಳುವುದು ಹೆಣ್ಣು!

ರೇಣುಕಾ ಭೋಜಪ್ಪ. ಬೀದರ
*ರಾಹುಲ್ ಗಾಂಧಿ ಹಿಂದೂ; ಹೌದು ಅಥವಾ ಅಲ್ಲ?*
ಹೌದು. ಎಲ್ಲಾ ವಿಷಯಗಳಲ್ಲೂ ಬಹಳ ಹಿಂದು!

ಆ.ರಾ. ಮಂಜುನಾಥ, ಗದರೆ
*ಪತ್ನಿಯರ ವಾಂತಿಗೂ, ಪ್ರೇಯಸಿಯರ ವಾಂತಿಗೂ ಏನು ವ್ಯತ್ಯಾಸ?*
ಒಂದರಿಂದ ಶಾಂತಿ, ಇನ್ನೊಂದರಿಂದ ಕ್ರಾಂತಿ!

ಶರಣಪ್ಪ ಜಿ. ಚಟ್ಟಿ, ಗೋಲಗೇರಿ
*ನಮ್ಮ ರಾಜಕಾರಣಿಗಳಿಗೆ ದೇವಾನುದೇವತೆಗಳಂತೆ ನಾಲ್ಕಾರು ಕೈಗಳಿದ್ದರೆ...?*



ಬೊಕ್ಕಸ ಡಬಲ್ ಸ್ಪೀಡ್‌ನಲ್ಲಿ ಖಾಲಿಯಾಗುತ್ತಿತ್ತು!

ಪಿ.ಜೆ. ರಾಘವೇಂದ್ರ, ಮೈಸೂರು
*ನಿರೀಕ್ಷಣಾ ಜಾಮೀನಿನಂತೆ ನಿರೀಕ್ಷಣಾ ವಿಚ್ಛೇದನವೂ ದೊರಕುವಂತಿದ್ದರೆ...?*
ತಾಳಿ ಕಟ್ಟಿದ ತಕ್ಷಣ ವಿವಾಹ ಜೀವನದ ಕೌಂಟ್ ಡೌನ್ ಆರಂಭ!

ಸಿ. ಹಾಲಸ್ವಾಮಿ, ಗಾಂಧಿನಗರ
*ಸಿನಿಮಾದಲ್ಲಿ ಹೆಣ್ಣು ಕುಣಿದರೆ ಐಟಂ ಸಾಂಗ್; ಗಂಡು ಕುಣಿದರೆ...?*
ಇವಳದು ಚರ್ಮ ಗೀತೆ, ಅವನದು ಚರಮಗೀತೆ!

ಕಂಡಕ್ಟರ್ ರಾಜು, ಗುಬ್ಬಿ
*ಹುಡುಗರು ಡ್ರೆಸ್ ಹಾಕಿಕೊಳ್ಳುವಾಗ ರೂಂ ಬಾಗಿಲು ಹಾಕೋಲ್ಲ, ಏಕೆ?*
ಪುಳಕ ಇಲ್ಲದ ದೃಶ್ಯಕ್ಕೆ ಚಿಲಕ ಯಾಕೆ ಅಂತ!

ವಿ. ಹೇಮಂತಕುಮಾರ್, ಬೆಂಗಳೂರು
*ಅವಳೊಂದು ಪದಬಂಧವಾಗಿದ್ದಾಳಲ್ಲಾ...?*
ಪರವಾಗಿಲ್ಲ ಬಿಡಿ; ಅರ್ಥವಾಗಲಿ, ಬಿಡಲಿ, ಒಂದು ಚೌಕಟ್ಟಿನಲ್ಲೇ ಇದ್ದಾಳೆಂದಾಯಿತು!

■ ರಾಮ್